

# ಸನ್ನಿಯೂ ನಾಚುತ್ತಾಳೆ!

ಸನ್ನಿ ಲಿಯೋನ್‌ಳ ಅಭಿಮಾನಿಗಳ ಪಾಲಿಗೂ ಇದು ವಿಶೇಷ ಸುದ್ದಿ! ನೀಲಿ ಚಿತ್ರಗಳಿಂದಲೇ ಖ್ಯಾತಿ ಗಳಿಸಿರುವ ಸನ್ನಿಯದು ನಾಚಿಕೆಯ ಸ್ವಭಾವವಂತೆ. ಹಾಗಂತ ಆಕೆಯೇ ಹೇಳಿಕೊಂಡಿದ್ದಾಳೆ. ಸನ್ನಿ ಸಾಮಾನ್ಯವಾಗಿ ಎಲ್ಲರೊಂದಿಗೆ ಬೆರೆಯುವುದಿಲ್ಲ. ಏಕೆಂದರೆ ಎಲ್ಲರನ್ನೂ ನಂಬುವುದು ಕಷ್ಟ ಎನ್ನುವುದು ಆಕೆಯ ಅನಿಸಿಕೆ. ಮನೆಯಲ್ಲಿ ಕುಳಿತು ಟೀವಿ, ಸಿನಿಮಾಗಳಲ್ಲಿ ನಟ ನಟಿಯರನ್ನು ನೋಡುವಾಗ ಅವರ ಅಭಿಮಾನಿಯಾಗಿ ಬಿಡುತ್ತಾಳೆ ಸನ್ನಿ. ಆದರೆ ಅದೇ ನಟ ಅಥವಾ ನಟಿ ಎದುರು ಬಂದಾಗ ಹಾಯ್ ಎನ್ನಲೂ ಆಕೆಗೆ ಭಯವಾಗುತ್ತದೆ. ಭಯಕ್ಕಿಂತಲೂ ಅದೊಂತರ ನಾಚಿಕೆ. ಬದಲಾಗಲು ಪ್ರಯತ್ನಿಸುತ್ತಿದ್ದೇನೆ ಎನ್ನುತ್ತಾಳೆ ಆಕೆ.

ಬಾಲಿವುಡ್‌ಗೆ ಕಾಲಿಟ್ಟು ಮೂರು ವರ್ಷ ಕಳೆದರೂ ಸನ್ನಿ ಲಿಯೋನ್ ಅದೃಷ್ಟ ಖುಲಾಯಿಸಿಲ್ಲ. ದೊಡ್ಡ ಗೆಲುವೆಂಬುದು ಸನ್ನಿ ಪಾಲಿಗೆ ಮರೀಚಿಕೆಯಾಗಿ ಉಳಿದಿದೆ. ಆದರೂ ಆಕೆಗೆ ಬಾಲಿವುಡ್ ಮುದ ನೀಡಿದೆಯಂತೆ. ಅಲ್ಲದೆ, 'ನೀಲಿ ಚಿತ್ರತಾರೆ' ಎಂಬ ಹಣೆಪಟ್ಟಿ ಹೊತ್ತುಕೊಂಡು ಬಂದ ತನ್ನನ್ನು ಬಾಲಿವುಡ್ ನೋಡುತ್ತಿರುವ ರೀತಿ ಬದಲಾಗಿದೆ ಎಂಬ ಖುಷಿಯೂ ಮೂಡಿದೆ.

'ಕಳೆದ ಕೆಲವು ವರ್ಷಗಳಲ್ಲಿ ಹಲವು ಅದ್ಭುತವಾದ, ಉತ್ತಮ ವ್ಯಕ್ತಿಗಳನ್ನು ಭೇಟಿ ಮಾಡಿದ್ದೇನೆ. ಅದರಲ್ಲಿಯೂ ಈ ವರ್ಷ ಅವಿಸ್ಮರಣೀಯ. ಸ್ನೇಹಿತರ ಬಳಗದ ಪಟ್ಟಿ ಹಿರಿದಾಗದೆಯೇ ಇರಬಹುದು, ಆದರೆ ವಿಭಿನ್ನ ಹಾಗೂ ವಿಶಿಷ್ಟವೆನಿಸುವ ವ್ಯಕ್ತಿಗಳೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ನನ್ನ ಹಾಗೂ ನನ್ನ ಪತಿಯೊಂದಿಗೆ ಜನರು ಮಾತನಾಡುವ ಕ್ರಮ ಬದಲಾಗಿದೆ' ಎಂದಿದ್ದಾಳೆ ಸನ್ನಿ.

ಬಾಲಿವುಡ್‌ಗೆ ಕಾಲಿಟ್ಟಾಗ ಚಿತ್ರರಂಗದ ಕೆಲವು ವರ್ಗದಿಂದ ಅವಹೇಳನೆಯ ಮಾತುಗಳನ್ನು ಸನ್ನಿ ಎದುರಿಸಿದ್ದಳಂತೆ. ಈಗ ಸನ್ನಿವೇಶ ಬದಲಾಗಿದೆ. ಕಾಲ ಕಳೆದಂತೆ ಸನ್ನಿಯೆಡೆಗಿನ ಬಾಲಿವುಡ್ ಅಭಿಪ್ರಾಯವೂ ಬದಲಾಗಿದೆಯಂತೆ. ಆಕೆ ಮತ್ತು ಪತಿ ಡೇನಿಯಲ್ ವೆಬರ್‌ಗೆ ಬಾಲಿವುಡ್ ಹೆಚ್ಚು ಮುಕ್ತವಾಗಿ ತೆರೆದುಕೊಳ್ಳುತ್ತಿದೆ ಎಂದು ಆಕೆಗೆ ಅನಿಸಿದೆ. ತಮ್ಮೊಟ್ಟಿಗೆ ಸಾಮಾಜಿಕವಾಗಿ ಬೆರೆಯದೇ ಇರುವುದು ಜನರ ತಪ್ಪಲ್ಲ ಎನ್ನುವ ಸನ್ನಿ, ಅದಕ್ಕೆ ತನ್ನನ್ನು ತಾನೇ ದೂಷಿಸಿಕೊಳ್ಳುತ್ತಾಳೆ. ಹೆಚ್ಚಾಗಿ ಪಾರ್ಟಿಗಳಲ್ಲಿ ಭಾಗವಹಿಸುವುದಿಲ್ಲ. ಸಾಮಾಜಿಕ ಕಾರ್ಯಕ್ರಮಗಳಿಗೂ ಹಾಜರಾಗುವುದು ತೀರಾ ವಿರಳ. ಹೀಗಾಗಿ ತನಗೆ ಜನಸಂಪರ್ಕ ಕಡಿಮೆ ಎನ್ನುತ್ತಾಳೆ. ಸನ್ನಿಯೇ ಹೀಗೆ ನಾಚಿಕೊಂಡರೆ...?!



# ನಿರ್ಮಾಪಕಿ ಅನೂಷ್ಕಾ

'ಎನ್‌ಎಚ್18' ಚಿತ್ರ ನಿರ್ಮಿಸಿ ಸಮಾಧಾನಕರ ಪ್ರತಿಕ್ರಿಯೆ ಪಡೆದಿದ್ದ ಅನೂಷ್ಕಾ ಶರ್ಮಾ ಒಂದರ ಹಿಂದೊಂದರಂತೆ ಮೂರು ಸಿನಿಮಾಗಳಿಗೆ ಬಂಡವಾಳ ಹೂಡುತ್ತಿದ್ದಾಳೆ ಎನ್ನುತ್ತಿದೆ ಬಾಲಿವುಡ್ ಮೂಲ. ಸದ್ಯಕ್ಕೆ ಆಕೆಯ ಬತ್ತಳಿಕೆಯಲ್ಲಿ ಪ್ರಮುಖ ಚಿತ್ರಗಳಿವೆ. ಕರಣ್ ಜೋಹರ್ ನಿರ್ದೇಶನದ 'ಏ ದಿಲ್ ಹೈ ಮುಷ್ಕಿಲ್' ಚಿತ್ರೀಕರಣದಲ್ಲಿ ಆಕೆ ಯೂರೋಪ್‌ನಲ್ಲಿದ್ದಾಳೆ. ಈ ಚಿತ್ರದಲ್ಲಿ ರಣಬೀರ್ ಕಪೂರ್ ಮತ್ತು ಐಶ್ವರ್ಯಾ ರೈ ಕೂಡ ನಟಿಸುತ್ತಿದ್ದಾರೆ.

ತನ್ನ ಸಿನಿಮಾ ಬದುಕು ನಟನೆಗೆ ಸೀಮಿತವಾಗದು ಎಂದು ಅನುಷ್ಕಾ ಈ ಹಿಂದೆಯೂ ಹೇಳಿಕೊಂಡಿದ್ದಳು. ಅದರಲ್ಲಿಯೂ ನಿರ್ಮಾಣದ ಕುರಿತು ಆಕೆಗೆ ಅಪಾರ ಆಸಕ್ತಿ. ನಿರ್ಮಾಣವೆಂದರೆ ತನಗೋಸ್ಕರ ತಾನು ಏನನ್ನಾದರೂ ಮಾಡಿಕೊಳ್ಳುವುದು ಎನ್ನುವುದು ಆಕೆಯ ಅಭಿಪ್ರಾಯ. ಅದು ಆಕೆಗೆ ಖುಷಿ ನೀಡುತ್ತದೆಯಂತೆ. ನಿರ್ಮಾಣವು ತನಗೆ ಸೃಜನಶೀಲತೆಯ ಹಾದಿ ತೆರೆಯುತ್ತದೆ ಎನ್ನುವ ನಂಬಿಕೆ ಆಕೆಯಲ್ಲಿದೆ. ಚಿತ್ರ ನಿರ್ಮಾಣವು ಕನಸು ಪೂರ್ಣಗೊಳಿಸುವ ಮತ್ತು ಪ್ರಶಸ್ತಿ ಗೆದ್ದಂತಹ ಸಂಭ್ರಮ ತರುವ ಕೆಲಸ. ನಟನೆ ಮತ್ತು ನಿರ್ಮಾಣ ಎರಡನ್ನೂ ಒಟ್ಟಿಗೆ ಕೊಂಡೊಯ್ಯುವುದು ಹೊಸ ಅನುಭವ ನೀಡುತ್ತದೆ ಎಂದು ಆಕೆ ಹೇಳುತ್ತಾಳೆ.

ಹೀಗಾಗಿ ಆಕೆಯ ತನ್ನ ನಿರ್ಮಾಣ ಸಂಸ್ಥೆಯಿಂದ ಮೂರು ಹೊಸ ಚಿತ್ರಗಳಿಗೆ ಕಥೆ ಹೊಸೆಯುವ ಕೆಲಸ ಮಾಡಿಸುತ್ತಿದ್ದಾಳೆ. ಅದರಲ್ಲಿ ಎರಡು ಚಿತ್ರಗಳ ಕಥೆ ಈಗಾಗಲೇ ಸಿದ್ಧವಾಗಿದೆ ಎಂದು ಆಕೆ ಹೇಳಿಕೊಂಡಿದ್ದಾಳೆ. ಇವುಗಳಲ್ಲಿ ಒಂದು ಚಿತ್ರದಲ್ಲಿ ಅನೂಷ್ಕಾ ನಟಿಸುವುದು ಖಾತರಿಯಾಗಿದೆ. ಇದರಲ್ಲಿ ಆಕೆಗೆ ನವದೀಪ್ ಸಿಂಗ್ ನಾಯಕ. ಇನ್ನೆರಡು ಚಿತ್ರಗಳಲ್ಲಿ ಒಂದು ಚಿತ್ರಕ್ಕೆ 'ಡೆಲ್ಲಿ ಬೆಲ್ಲಿ' ಬರಹಗಾರ ಅಕ್ಷತ್ ವರ್ಮಾ ಆ್ಯಕ್ಷನ್ ಕಟ್ ಹೇಳಲಿದ್ದರೆ, ಮತ್ತೊಂದು ಚಿತ್ರದ ಮೂಲಕ ಅನ್ವಾಯ್ ಲಾಲ್ ಎಂಬ ಹೊಸ ಪ್ರತಿಭೆ ನಿರ್ದೇಶಕನಾಗಿ ಪರಿಚಯವಾಗಲಿದ್ದಾನೆ.

■ ಅಮಿ